<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ, ಜಮಖಂಡಿ.</u>

<u>ಸಿ.ಸಿ.ನಂ.**493/2025**</u>

1) ಅಡಿವೆಪ್ಪ ತಂದೆ ತಮ್ಮಣ್ಣ ಮಾಂಗ,
ವಯಸ್ಸುಃ 32 ವರ್ಷ, ಉದ್ಯೋಗಃ ಒಕ್ಕಲುತನ,
ಸಾಃ ಟಕ್ಕಳಕಿ, ತಾಃ ಜಮಖಂಡಿ,
ಜಿಃ ಬಾಗಲಕೋಟೆ.

ಫಿರ್ಯಾದಿದಾರ

– ವಿರುದ್ಧ –

1) ಶ್ರೀಶೈಲ್ ತಂದೆ ರಾಮಯ್ಯ ಮಠಪತಿ,
ವಯಸ್ಸುಃ 45 ವರ್ಷ, ಉದ್ಯೋಗಃ ವ್ಯಾಪಾರ & ಒಕ್ಕಲುತನ,
ಸಾಃ ಚಿಕ್ಕಪಡಸಲಗಿ, ತಾಃ ಜಮಖಂಡಿ,
ಜಿಃ ಬಾಗಲಕೋಟೆ.

ಆರೋಪಿ

<u>ಆಪಾದನೆಯ ಸಾರಾಂಶ</u>

ನಾನು ಶ್ರೀ.ರಾಜಶೇಖರ ಎಸ್. ಹರಸೂರ, ಬಿ.ಎ. ಎಲ್.ಎಲ್.ಬಿ. ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಜಮಖಂಡಿ, ಈ ಮೇಲೆ ನಮೂದಿಸಿದ ಆರೋಪಿಯಾದ ನಿಮ್ಮ ವಿರುದ್ಧ ಈ ಕೆಳಗಿನಂತೆ ಆಪಾದನೆ ಇರುತ್ತದೆ ಎಂದು ತಿಳಿಸುತ್ತಿದ್ದೇನೆಃ

ಆರೋಪಿಯಾದ ನೀವು ಫಿರ್ಯಾದಿದಾರರಿಗೆ ಕಾನೂನುಬದ್ಧವಾಗಿ ಕೊಡಬೇಕಾಗಿದ್ದ ಕೈಸಾಲ ರೂ.3,00,000/- (ರೂಪಾಯಿ ಮೂರು ಲಕ್ಷ ಮಾತ್ರ) ಮೊತ್ತದ ಪಾವತಿಗಾಗಿ ನಿಮ್ಮ ಬ್ಯಾಂಕ್ ಖಾತೆ ಇರುವ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್, ಶಾಖೆ ಮೈಗೂರು ರಸ್ತೆ, ಜಮಖಂಡಿ ಬ್ಯಾಂಕ್ ಚೆಕ್ ನಂ.064900 ದಿನಾಂಕ 18.07.2024 ನ್ನು ರೂ.3,00,000/- (ರೂಪಾಯಿ ಮೂರು ಲಕ್ಷ ಮಾತ್ರ) ಮೊತ್ತಕ್ಕೆ ಫಿರ್ಯಾದಿದಾರರಿಗೆ ನೀಡಿದ್ದು, ಅವರು ಸದರಿ ಚೆಕ್‌ನ್ನು ತಮ್ಮ ಖಾತೆ ಇರುವ ಬ್ಯಾಂಕ್‌ನ ಮೂಲಕ ನಗದೀಕರಿಸಲು ಹಾಜರುಪಡಿಸಿದಾಗ, ಮೊತ್ತ ಪಾವತಿಸಬೇಕಾದ ಬ್ಯಾಂಕ್‌ನವರು ನಿಮ್ಮ ಬ್ಯಾಂಕ್ ಖಾತೆಯಲ್ಲಿ "Funds Insufficient" ಎನ್ನುವ ಹಿಂಬರಹವನ್ನು ದಿನಾಂಕ 19.07.2024 ರಂದು ನೀಡಿದ್ದು, ಸದರಿ ಚೆಕ್ ನಗದೀಕರಣವಾಗದೇ ವಾಪಸ್ ಬಂದಿದ್ದು, ಆ ಬಗ್ಗೆ ಫಿರ್ಯಾದಿದಾರರು ತಮ್ಮ ವಕೀಲರ ಮೂಲಕ ನಿಮಗೆ ದಿನಾಂಕ 25.07.2024 ರಂದು ತಿಳುವಳಿಕೆ ಪತ್ರವನ್ನು (ಲೀಗಲ್ ನೋಟೀಸ್) ನೀಡಿದ್ದು, ಸದರಿ ತಿಳುವಳಿಕೆ ಪತ್ರ (ಲೀಗಲ್ ನೋಟೀಸ್) ನಿಮಗೆ ದಿನಾಂಕ 26.07.2024 ರಂದು ಜಾರಿಯಾಗಿದ್ದು, ನಂತರ 15 ದಿನಗಳು ಕಳೆದರೂ ಸಹ ನೀವು ಚೆಕ್‌ನಲ್ಲಿ ನಮೂದಿಸಿದ ಹಣವನ್ನು ಪಾವತಿಸಿರುವುದಿಲ್ಲ, ಆದ್ದರಿಂದ ಈ ಮೂಲಕ N.I.Act ಕಲಂ.138 ರ ಅಡಿಯಲ್ಲಿ ಅಪರಾಧ ಎಸಗಿರುತ್ತೀರಿ, ಎಂದು ನಿಮ್ಮ ಮೇಲೆ ಆಪಾದನೆ ಇರುತ್ತದೆ.

ಪ್ರಶ್ನೆ 1) ಈಗ ಓದಿ ಹೇಳಲಾದ ಆರೋಪದ ಸಾರಾಂಶ ತಿಳಿಯಿತೇ ?

ಉತ್ತರಃ ತಿಳಿಯಿತು.

ಪ್ರಶ್ನೆ 2) ಸದರಿ ಆರೋಪದ ಸಾರಾಂಶವನ್ನು ಒಪ್ಪಿ ಕೊಳ್ಳುವಿರೋ ಅಥವಾ ವಿಚಾರಣೆಯಾಗ ಬಯಸುವಿರೊ ?

ಉತ್ತರಃ ಅಪರಾಧ ಮಾಡಿಲ್ಲ, ವಿಚಾರಣೆಯಾಗಲಿ.

ಮೇಲೆ ಹೇಳಲಾದ ಆರೋಪದ ಸಾರಾಂಶವನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಅವರ ಭಾಷೆಯಲ್ಲಿ ಬರೆದುಕೊಳ್ಳಲಾಯಿತು ಎಂದು ಈ ಮೂಲಕ ದೃಢೀಕರಿಸಲಾಗಿದೆ.

ಓ.ಹೇ.ಕೇ. ಸರಿ ಇದೆ.

RAJASHEKHAR

Digitally signed by RAJASHEKHAR
Date: 2026.03.17 18:35:08 +0530

ಸ್ಥಳಃ ಜಮಖಂಡಿ.
ದಿನಾಂಕಃ 17.03.2026

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ. ಜಮಖಂಡಿ.